ನಾವು ಈಗಾಗಲೇ ಸಾಕ್ಷ್ಯ ಒತ್ತಡವನ್ನು ಕೇಂದ್ರ ಸರ್ಕಾರಕ್ಕೆ ತರುತ್ತಿದ್ದೇವೆ. ಇದು ಇಂಪಾರ್ಟೆಂಟ್ ಬ್ರಾಡ್‌ಗೇಜ್ ಲೈನ್ ಆಗಬೇಕು ಎಂದು ಹೇಳಿ ಅದರ ಬಗ್ಗೆ ಇನ್ನೂ ಹೆಚ್ಚಿನ ಒತ್ತಡವನ್ನು ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮೇಲಿ ಮಾಡುತ್ತದೆ. ತಾವೂ ಸಹ ತಮ್ಮ ಪ್ರಭಾವವನ್ನು ಬಳಸಿ ಅದನ್ನು ಮಂಜೂರ್ ಮಾಡಿಸಬೇಕು ಎಂದು ತಮಗೂ ನಾನು ವಿನಂತಿ ಮಾಡುತ್ತಿದ್ದೇನೆ.

ರಾಜ್ಯದಲ್ಲಿ ನೂತನ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡುವುದು

45(499) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನೂತನ ಕೈಗಾರಿಕೆಗಳಿಗೆ ಅನುಮತಿ ಕೋರಿ ಬಂದಿರುವ ಅರ್ಜಿಗಳೆಷ್ಟು;

ಆ. ಕಳೆದ ಮೂರು ವರ್ಷಗಳಿಂದ ಈ ರೀತಿಯ ಎಷ್ಟು ಕೈಗಾರಿಕೆಗಳಿಗೆ ಅನುಮತಿ ನೀಡಲಾಗಿದೆ;

ಇ. ಈ ವರ್ಷ ಎಷ್ಟು ಕೈಗಾರಿಕೆಗಳಿಗೆ ಅನುಮತಿ ನೀಡಲು ಸರ್ಕಾರ ನಿರ್ಧರಿಸಿದೆ. ಅವು ಯಾವುವು;

ಈ. ಕೈಗಾರಿಕೆಗಳಿಗೆ ಅನುಮತಿ ನೀಡಲು ಅನುಸರಿಸುವ ಮಾನದಂಡಗಳೇನು.

ಉ. ಇಂತಹ ಕೈಗಾರಿಕೆಗಳಿಗೆ ಸರ್ಕಾರ ಸಹಾಯಧನ ಸಬ್ಸಿಡಿ ಹಣ ನೀಡುವುದೇ, ಹಾಗಿದ್ದಲ್ಲಿ ಎಷ್ಟು

ಊ. ಇದುವರೆವಿಗೂ ಎಷ್ಟು ಕೈಗಾರಿಗಳಿಗೆ ಸಹಾಯ ಧನ ಮಂಜೂರು ಮಾಡಲಾಗಿದೆ. ಕೊಡಗು ಜಿಲ್ಲೆಯನ್ನೊಳಗೊಂಡಂತೆ ವಿವರಗಳನ್ನು ಒದಗಿಸುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು)

ಅ. ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯು 487 ಅರ್ಜಿಗಳನ್ನು ಅನುಮೋದನೆಗಾಗಿ ಸ್ವೀಕರಿಸಿರುತ್ತದೆ ಹಾಗೂ ಉನ್ನತಮಟ್ಟದ ಸಮಿತಿಯು 124 ಅರ್ಜಿಗಳನ್ನು ಅನುಮೋದನೆಗಾಗಿ ಸ್ವೀಕರಿಸಿರುತ್ತದೆ.

ಆ. ಕಳೆದ ಮೂರು ವರ್ಷಗಳಿಂದ ಅಂದರೆ 1.4.99 ರಿಂದ 31.3.02ರ ಅವಧಿಯಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮುಖೇನ ಒಟ್ಟು 487 ಕೈಗಾರಿಕಾ ಯೋಜನೆಗಳಿಗೆ (ಪ್ರತಿ ಯೋಜನೆ ರೂ. 50.00 ಕೋಟಿಗಳಿಗಿಂತ ಕಡಿಮೆ ಬಂಡವಾಳ) ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ರೂ. 8638.46 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಸುಮಾರು 2,09,500 ಜನರಿಗೆ ಉದ್ಯೋಗಾವಕಾಶ ಲಭಿಸಲಿದೆ. ಹಾಗೂ ಉನ್ನತಮಟ್ಟದ ಸಮಿತಿಯಲ್ಲಿ ಒಟ್ಟು 124 ಕೈಗಾರಿಕಾ ಯೋನೆಗಳಿಗೆ (ಪ್ರತಿ ಯೋಜನೆ ರೂ. 50.00 ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ) ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ರೂ. 55,375.61 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಸುಮಾರು 1,49,153 ಜನರಿಗೆ ಉದ್ಯೋಗಾವಕಾಶ ಲಭಿಸಿದೆ.

ಇ. ಚಾಲ್ತಿ ವರ್ಷದಲ್ಲಿ ಅಂದರೆ 2002-03ನೇ ಸಾಲಿನಲ್ಲಿ ಒಟ್ಟು 125 ಮಧ್ಯಮ ಮತ್ತು ಭಾರೀ ಪ್ರಮಾಣದ ಕೈಗಾರಿಕಾ ಯೋಜನೆಗಳಿಗೆ (ರೂ. 50 ಕೋಟಿ ಗಳವರೆಗೆ ಬಂಡವಾಳ ಹೂಡಲಿರುವ ಯೋಜನೆಗಳು) ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ ಮುಖೇನ ಮಂಜೂರಾತಿ ನೀಡಲು ಉದ್ದೇಶಿಸಿದೆ. ಈ ಯೋಜನೆಗಳಲ್ಲಿ ಒಟ್ಟು ರೂ. 2500 ಕೋಟಿಗಳಷ್ಟು ಬಂಡವಾಳ ಹೂಡಿಕೆಯಾಗಲಿದ್ದು ಸುಮಾರು 30,000 ಜನರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ.

ಚಾಲ್ತಿ ವರ್ಷದಲ್ಲಿ ಉನ್ನತ ಮಟ್ಟದ ಸಮಿತಿಯು (ರೂ.50 ಕೋಟಿಗಳಿಗಿಂತ ಹೆಚ್ಚು ಬಂಡವಾಳ ಹೂಡಲಿರುವ ಯೋಜನೆಗಳು) 5 ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಹಾಗೂ ಮುಂಬರುವ ಯೋಜನೆಗಳಿಗೆ ಸಮಿತಿಯು ಪರಿಶೀಲಿಸಿ ಅಗತ್ಯಕ್ರಮ ತೆಗೆದುಕೊಳ್ಳಲಾಗುವುದು. ಈ ಉದ್ದೇಶಿತ ತೆಗೆದುಕೊಳ್ಳಲಾಗುವುದು. ಈ ಉದ್ದೇಶಿತ ಯೋಜನೆಗಳಲ್ಲಿ ಕೃಷಿ ಮತ್ತು ಆಹಾರ ಸಂಸ್ಕರಣೆ, ಮಾಹಿತಿ ತಂತ್ರಜ್ಞಾನ, ಖನಿಜ ಆಧಾರಿತ ಕೈಗಾರಿಗಳು, ಜೈವಿಕತಂತ್ರಜ್ಞಾನ ಫಾರ್ಮಾಸ್ಯುಟಿಕಲ್ಸ್, ಮೆಕ್ಯಾನಿಕಲ್ ಮತ್ತು ಆಟೋಮೇಬೈಲ್ ಇಂಜಿನಿಯರಿಂಗ್, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಪ್ರಾವಾಸೋದ್ಯಮಗಳಲ್ಲಿ ಹೊಡಲಿರುವ ಬಂಡವಾಳ ಸೇರಿವೆ.

ಈ. 1. ರೂ. 50 ಕೋಟಿಗಳಿಗಿಂತ ಹೆಚ್ಚು ಬಂಡವಾಳ ಹೂಡಿಕೆಯೊಡನೆ ಸ್ಥಾಪಿಸಲ್ಪಡುವ ಬೃಹತ್ ಕೈಗಾರಿಕಾ ಯೋಜನೆಗಳನ್ನು ಉನ್ನತಮಟ್ಟದ ಸಮಿತಿ ಸಭೆಯಲ್ಲಿ ಪರಿಗಣಿಸಿ ಮಂಜೂರಾತಿ ನೀಡಲಾಗುವುದು.

2. ರೂ. 3 ಕೋಟಿಗಳಿಗಿಂತ ಹೆಚ್ಚು ಮತ್ತು ರೂ. 50 ಕೋಟಿಗಳವರೆಗೆ ಬಂಡವಾಳ ಹೂಡಿಕೆಯೊಡನೆ ಸ್ಥಾಪಿಸಲ್ಪಡುವ ಮಧ್ಯಮ ಮತ್ತು ದೊಡ್ಡಪ್ರಮಾಣದ ಕೈಗಾರಿಕಾ ಯೋಜನೆಗಳನ್ನು ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಪರಿಗಣಿಸಿ ಮಂಜೂರಾತಿ ನೀಡಲಾಗುವುದು.

3. ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿಯು 3 ಕೋಟಿಗಳ ಬಂಡವಾಳವುಳ್ಳ ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳನ್ನು ಅನುಮೋದಿಸುತ್ತದೆ.

ನಿಗಧಿತ ನಮೂನೆಯಲ್ಲಿ ಯೋಜನಾ ವರದಿಗಳನ್ನು ಪಡೆದು ಮೇಲ್ಕಾಣಿಸಿದ ಸಭೆಗಳಲ್ಲಿ ಮಂಡಿಸಿ ಮಂಜೂರಾತಿ ದೊರೆತ ನಂತರ ಮೂಲಭೂತ ಸೌಕರ್ಯಗಳು ಮತ್ತು ಸರ್ಕಾರದ ನೀತಿ ನಿಯಮಗಳ ಪ್ರಕಾರ ಸಹಾಯ ಮತ್ತು ಸವಲತ್ತುಗಳನ್ನು ಒದಗಿಸಲಾಗುವುದು.

ಉ. ಚಾಲ್ತಿಯಲ್ಲಿರುವ ಕೈಗಾರಿಕಾ ನೀತಿಯಂತೆ ವಲಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಮತ್ತು ವಲಯ ಬಿ.ಸಿ.ಡಿ.ಗಳಲ್ಲಿ ಅತಿ ಸಣ್ಣ ಕೈಗಾರಿಕೆಗಳಿಗೆ ಮಾತ್ರ ಸಹಾಯಧನ ನೀಡಲಾಗುತ್ತಿದೆ. ಈ ಸಹಾಯಧನ ಶೇಕಡ 15 ರಿಂದ 30 ರಷ್ಟು ಇರುತ್ತದೆ.

ಊ. ಮೈಗಾ ಯೋಜನೆಗಳಿಗೆ ಹಾಗೂ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಹಾಯಧನ ನೀಡುತ್ತಿಲ್ಲ ಹಿಂದಿನ ಮೂರು ವರ್ಷಗಳಲ್ಲಿ ಒಟ್ಟು 3508 ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಮಂತ್ರಿಯವರು ಒಳ್ಳೆಯ ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಕರ್ನಾಟಕದ ಅವರು ಸುಮಾರು 3,58,653 ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಲಾಗಿಯೆಂದು ಅವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಕನ್ನಡದವರಿಗೆ ಎಷ್ಟು ಹುದ್ದೆಗಳನ್ನು ಕೊಟ್ಟಿದ್ದಾರೆ? ಇದರಲ್ಲಿ ಕನ್ನಡದವರಿಗೆ ಏನಾದರೂ ರಿಸರ್ವೇಷನ್ ಇಡಲಾಗಿದೆಯೇ? ಕರ್ನಾಟಕದಲ್ಲಿ ಇನ್ನೂ ಎಷ್ಟು ಕೈಗಾರಿಕೆಗಳಿಗೆ ಸಹಾಯಧನವನ್ನು ಕೊಡುವುದು ಬಾಕಿ ಇದೆ? ಅದು ಎಷ್ಟು ವರ್ಷಗಳಿಂದ ಬಾಕಿ ಇದೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಶ್ರೀಮತಿ ಸರೋಜಿನಿ ಮಹಿಷಿ ವರದಿ ಏನಿದೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಅಷ್ಟೇ ಅಲ್ಲ, 'ಸಿ' ಮತ್ತು 'ಡಿ' ವರ್ಗದ ನೌಕರಿಗಳಲ್ಲಿ 100 ಪರ್ಸೆಂಟ್ ಕರ್ನಾಟಕದವರಿಗೆ ಕೊಡಬೇಕೆಂದು ಇದೆ. ಜಿಲ್ಲಾಧಿಕಾರಿಗಳಿಗೆ ನಾನೇ ಸ್ವತಃ ಡಿ.ಓ. ಲೆಟರ್ ಬರೆದು, ಆಯಾ ಜಿಲ್ಲೆಯಲ್ಲಿ ಎಲ್ಲಿಲ್ಲಿ ಕೈಗಾರಿಕೆಗಳು ಬರುತ್ತಿವೆ ಅವುಗಳ ಬಗ್ಗೆ ಪರಿಶೀಲಿಸಿ ಕಡ್ಡಾಯವಾಗಿ ಕನ್ನಡಿಗರಿಗೆ ಉದ್ಯೋಗವನ್ನು ಕೊಡಿಸಬೇಕೆಂದು ಆದೇಶ ಕೊಟ್ಟಿದ್ದೇನೆ. ಉದಾಹರಣೆಗೆ ಟಯೋಟಾ ಕಿರ್ಲೋಸ್ಕರ್‌ನಲ್ಲಿ ನನಗೆ ತಿಳಿದ ಹಾಗೆ ಶೇಕಡ 95 ರಿಂದ 96 ಪರ್ಸೆಂಟ್ ಹುದ್ದೆಗಳಲ್ಲಿ ಕನ್ನಡಿಗರೇ ಇದ್ದಾರೆ. ಕೆಲವು ದಿವಸಗಳಿಂದ ನಾನು ಇದರ ಬಗ್ಗೆ ರಿವ್ಯೂ ಕೂಡ ಮಾಡಿದ್ದೇನೆ. ಇವೊತ್ತು ಲಾರ್ಜ್ ಆಂಡ್ ಮೀಡಿಯಂ ಇಂಡಸ್ಟ್ರೀಗಳಿಗೆ ಸಬ್ಸಿಡಿ ಸಿಗುವುದಿಲ್ಲ. ಅಷ್ಟೇ ಅಲ್ಲ, ಸಣ್ಣ ಕೈಗಾರಿಕೆಗಳಲ್ಲಿ ಡಿ ಕ್ಲಾಸಿಫಿಕೇಷನ್‌ನಲ್ಲಿ ಗ್ರೋತ್ ಸೆಂಟರ್‌ಗಳು, ಮಿನಿ ಗ್ರೋತ್ ಸೆಂಟರ್‌ಗಳು ಏನು ಇವೆ ಅಲ್ಲಿ 25 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇನ್‌ವೆಸ್ಟ್‌ಮೆಂಟ್ ಇದ್ದರೆ ಅಲ್ಲಿ ಸಬ್ಸಿಡಿ ಬಿ, ಸಿ, ಡಿ, ಎಂದು ಕೊಡುತ್ತಿದ್ದೇವೆ. ಈ ಬಗ್ಗೆ ಅಂದಾಜು 367 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುವುದು ಬಾಕಿ ಇದೆ. ಅದರ ಬಗ್ಗೆ ಕೂಡ ಆರ್ಥಿಕ ಇಲಾಖೆ ಜೊತೆ ಚರ್ಚಿಸಿ ಈ ಸಬ್ಸಿಡಿ ಬಿಡುಗಡೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ನಾನು ಎಷ್ಟು ವರ್ಷಗಳಿಂದ ಸಬ್ಸಿಡಿ ಕೊಡುವುದು ಬಾಕಿ ಇದೆ ಎಂದು ಕೇಳಿದೆ. ಅದಕ್ಕೆ ಅವರು ಸಮರ್ಪಕವಾದ ಉತ್ತರ ಕೊಡಲಿಲ್ಲ. ಅದರ ಜೊತೆಗೆ ಇಂದು ಪೀಣ್ಯ ಹಾಗೂ ವೈಟ್‌ಫೀಲ್ಡ್‌ನಲ್ಲಿ ಹಲವಾರು ಕೈಗಾರಿಕೆಗಳು ಮುಚ್ಚಿಹೋಗಿವೆ. ಇವು ಯಾವ ಕಾರಣಕ್ಕಾಗಿ ಮುಚ್ಚಿಹೋಗಿವೆ? ಇವುಗಳನ್ನು ಪುನಃ ತೆರೆಯುವುದಕ್ಕೆ ಕಾನೂನಿನಲ್ಲಿ ಏನಾದರೂ ಅವಕಾಶವಿದೆಯೇ? ತಾವೇನಾದರೂ ಇದರ ಬಗ್ಗೆ ಅಧ್ಯಯನ ಮಾಡಿದ್ದೀರಾ ಅದರ ರಿಪೋರ್ಟ್ ಏನಾದರೂ ಇದೆಯೇ? ಮತ್ತೆ ಕೊಡಗು ಜಿಲ್ಲೆಯಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ಬಿಡುಗಡೆ ಮಾಡುವುದು ಬಾಕಿ ಇದೆ? ಇದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ಕೊಡಗು ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೆಗಳನ್ನು ತರುವುದಕ್ಕೆ ಆಗುವುದಿಲ್ಲ. ಉತ್ತರ ಕನ್ನಡ ಜಿಲ್ಲೆ, ಕೊಡಗು ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪರಿಸರದ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕಾದರೆ ಅಲ್ಲಿ ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಹಾಗೂ ಪ್ರವಾಸೋದ್ಯಮ ಬೆಳೆಯುವುದಕ್ಕೆ ಮಾತ್ರ ಸಾಧ್ಯ. ನಿಮ್ಮ ಜಿಲ್ಲೆಯಲ್ಲಿ 324 ಕೈಗಾರಿಕೆಗಳಿಗೆ ಮಂಜೂರಾತಿ ಸಿಕ್ಕಿದೆ. ಟೋಟಲ್ ಸಬ್ಸಿಡಿ ಐದೂವರೆ ಕೋಟಿ ರೂಪಾಯಿಗಳು

ಇದೆ. ನಿಮ್ಮ ಜಿಲ್ಲೆಗೆ ಕೊಡುವಂತಹ ಬಾಕಿ ಎಷ್ಟಿದೆ ಎನ್ನುವಂತಹ ಫಿಗರ್ಸ್ ನನ್ನ ಹತ್ತಿರ ಇಲ್ಲ. ಅದನ್ನು ನಂತರ ನಾನು ತಿಳಿಸುತ್ತೇನೆ. ಇನ್ನು ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ ಬೆಳಗಾಂ ಅಥವಾ ಹಲವಾರು ಕಡೆ ಕೈಗಾರಿಕೆಗಳು ಅನಾರೋಗ್ಯವಾಗಿವೆ. ಅದಕ್ಕೆ ಹಲವಾರು ಕಾರಣಗಳು ಇದೆ. ಅಪ್‌ಗ್ರೇಡೇಷನ್ ಆಫ್ ಟೆಕ್ನಾಲಜಿ ಇರಬಹುದು, ಮಾರ್ಕೆಟಿಂಗ್ ಪ್ರಾಬ್ಲಂ ಇರಬಹುದು. ಇನ್‌ಡಿಕ್ವೇಟ್ ಫೈನಾನ್ಸ್ ಇರಬಹುದು. ಅಥವಾ ಸರಿಯಾದ ಸಮಯದಲ್ಲಿ ಬ್ಯಾಂಕ್ ಲೋನನ್ನು ರಿಲೇಜ್ ಮಾಡುವ ವಿಚಾರ ಇರಬಹುದು. ಅಥವಾ ಮಿಸ್‌ಮ್ಯಾನೇಜ್‌ಮೆಂಟ್ ಇರಬಹುದು. ಹೀಗೆ ಹಲವಾರು ಕಾರಣಗಳು ಇವೆ. ಒಂದೇ ಕಾರಣದಿಂದ ಕೈಗಾರಿಕೆ ಅನಾರೋಗ್ಯವಾಗಿದೆ ಎಂದು ನಾವು ಹೇಳುವುದಕ್ಕೆ ಬರುವುದಿಲ್ಲ. ಹಾಗಾಗಿ ಸರ್ಕಾರ ಇವತ್ತು ಸಹ ಸಣ್ಣ ಕೈಗಾರಿಕೆಗಳು ಅನಾರೋಗ್ಯವಾಗಿರುವುದರ ಬಗ್ಗೆ ಕಾರಣಗಳೇನು ಎಂದು ವಿಚಾರಣೆ ಮಾಡುವುದಕ್ಕೆ ನಾವು ಇದನ್ನು I.S.E.C.ಗೆ ರೆಫರ್ ಮಾಡಿದ್ದೇವೆ. ಇನ್ನೂ ಮುಂದೆ ಬರುವ ಎರಡು ತಿಂಗಳಲ್ಲಿ ಅದರ ವರದಿ ಬರುತ್ತದೆ. ಆ ವರದಿ ಬಂದನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ತಾವು ಗ್ಲೋಬಲ್ ಇನ್‌ವೆಸ್ಟರ್ಸನ್ನು ಮೀಟ್ ಮಾಡಿದಿರಲ್ಲಾ, ದೊಡ್ಡ ಪ್ರಚಾರ ಮಾಡಿ 25 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಇನ್‌ವೆಸ್ಟ್ ಆಗುತ್ತದೆಂದು ಹೇಳಿ, ಆಗ ಎಷ್ಟು ಅರ್ಜಿಗಳು ಬಂದಿತ್ತು? ನೀವು ಎಷ್ಟು ಅರ್ಜಿಗಳನ್ನು ಅಕ್ಸೆಪ್ಟ್ ಮಾಡಿದ್ದೀರಿ ಇಲ್ಲಿಯವರೆಗೆ ಎಷ್ಟು ಇನ್‌ವೆಸ್ಟ್‌ಮೆಂಟ್ ಆಗಿದೆ? ದಯವಿಟ್ಟು ಈ ವಿವರಗಳನ್ನು ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ:- ಇಲ್ಲಿ ಈಗ ಅದರ ಬಗ್ಗೆ ಸರಿಯಾದ ವಿವರ ನನ್ನಲ್ಲಿ ಇಲ್ಲ. ಈಗಾಗಲೇ 274 ಪ್ರಾಜೆಕ್ಟ್‌ಗಳಿಗೆ 24-25 ಸಾವಿರ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಕ್ಲಿಯರ್ ಮಾಡಿದ್ದೇವೆ. As on to-day, under inplementation is about Rs. 10,000 crore. ಕೆಲವು ಇಂಪ್ಲಿಮೆಂಟ್ ಆಗಿವೆ. ಕೆಲವು ಇಂಪ್ಲಿಮೆಂಟೇಷನ್ ಆಗುವ ಹಂತದಲ್ಲಿವೆ. ಇಡೀ ವಿಶ್ವದಲ್ಲಿ ಕೈಗಾರಿಕೆಗಳು ಬೆಳೆಯುವುದಕ್ಕೆ ಬಹಳ ಕಷ್ಟವಾಗಿದೆ. ಅದರ ಬರ್ಡನ್ ನಮ್ಮ ಮೇಲೆ ಆಗಿದೆ. ಆದರೂ ಸಹ ಹಲವಾರು ಕೈಗಾರಿಕೆಗಳು ಬರುವುದಕ್ಕೆ ಪ್ರಾರಂಭವಾಗಿದೆ. ಆದರೂ ಸ್ಲೋ ಡೌನ್ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಬಹಳಷ್ಟು ಜನ ಮಂಜೂರಾತಿ ತೆಗೆದುಕೊಂಡರೂ ಸಹ ಕೈಗಾರಿಕೆಯನ್ನು ಪ್ರಾರಂಭ ಮಾಡಿಲ್ಲ. ಏಕೆಂದರೆ ಇವತ್ತು ಪ್ರೈವೇಟ್ ಎಂಟರ್ ಪ್ರೀನರ್ಸ್‌ನವರು ಯಾವಾಗ ಕೈಗಾರಿಕೆ ಪ್ರಾರಂಭ ಮಾಡಬೇಕೆನ್ನುವುದು ಮಾರ್ಕೆಟಿಂಗ್ ಕಂಡೀಷನ್ ನೋಡಿ ಮಾಡುತ್ತಾರೆಯೇ ವಿನಃ ನಾವು ಯಾರು ಹೇಳಿದರೂ ಮಾಡುವುದಿಲ್ಲ. ಆದರೂ ಸಹ ಈ ಎಲ್ಲಾ ಕಷ್ಟದ ಪರಿಸ್ಥಿತಿಯಲ್ಲೂ ಗ್ಲೋಬಲ್ ವಿಷಯದಲ್ಲಿ ನಾವು ಮಂಜೂರು ಮಾಡಿದ್ದೇವೆ. ಕೆಲವು ಈಗಾಗಲೇ ಇಂಪ್ಲಿಮೆಂಟ್ ಆಗಿವೆ. ಇನ್ನು ಕೆಲವು ಇಂಪ್ಲಿಮೆಂಟ್ ಆಗುತ್ತಿವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಗ್ಲೋಬಲೈಸೇಷನ್ ಕಾರಣದಿಂದ ಕೆಲವು ವಿಶೇಷವಾದಂತಹ ಕ್ಷೇತ್ರಗಳಲ್ಲಿ ಇವತ್ತು ಕೈಗಾರಿಕೆಗಳು ಬಾಗಿಲು ಹಾಕುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿ ಈ ಬಗ್ಗೆ ಮುಂದಾಲೋಚನೆಯನ್ನು ಸರ್ಕಾರ ಮಾಡಿದೆಯಾ? ಯಾವ ಸೆಕ್ಟಾರ್ ಅನ್ನು ಬಾಗಿಲು ಹಾಕಬಹುದು ಮತ್ತು ಅದಕ್ಕೆ ಪರ್ಯಾಯವಾಗಿ ಅವರು ಆ ಕ್ಷೇತ್ರಗಳಲ್ಲಿ ಮುನ್ನೆಡೆಸುವುದಕ್ಕೆ ಏನಾದರೂ ಯೋಜನೆ ಮಾಡಿದೆಯಾ?

ಶ್ರೀ ಆರ್.ವಿ. ದೇಶಪಾಂಡೆ:- ಇದಕ್ಕೆ ಉತ್ತರವನ್ನು ಕೇಂದ್ರ ಸರ್ಕಾರ ಕೊಡಬೇಕಾಗುತ್ತದೆ. ತಾವು ಗ್ಲೋಬಲೈಸೇಷನ್ ಬಗ್ಗೆ ಕೇಳಿದ್ದೀರಿ. ಗ್ಲೋಬಲೈಸೇಷನ್, ಪ್ರೈವೇಟೈಸೇಷನ್ ಹಾಗೂ ಲೆಬರಲೈಸೇಷನ್ ಇವುರ 1993ರಲ್ಲಿ ಪ್ರಾರಂಭವಾಗಿದೆ. ಆಗ ನಾವು ಅಧಿಕಾರದಲ್ಲಿ ಇದ್ದೆವು Successive government in the centre have supported this. ಯಾವ ಸರ್ಕಾರವು ಬಂದ್ ಮಾಡುವುದಕ್ಕೆ ಹೋಗಿಲ್ಲ. ಹಾಗಾಗಿ ಇವತ್ತು 21ನೇ ಶತಮಾನದಲ್ಲಿ ಕಾಂಪಿಟೇಷನ್ ನಿಂದ, ಕ್ವಾಲಿಟಿಯಿಂದ ಪರಿಣಾಮಗಳು ಆಗಿದ್ದಾನೆ. 21ನೇ ಶತಮಾನ ಗ್ರಾಹಕರ ಶತಮಾನ ಗ್ರಾಹಕರಿಗೆ ಯಾವುದೇ ವಸ್ತು ಬೇಕಾದರೂ ಚೀಪೆಸ್ಟ್ ಆಗಿ ಸಿಗಬೇಕು. Those who have got quality and who are cost-effective will succeed ಹಾಗಾಗಿ ಏನು ಮಲ್ಟಿನ್ಯಾಷನಲ್ ಕಂಪನಿಗಳು ಬರುತ್ತವೆ ಅಥವಾ ಫಾರಿನ್ ಇನ್‌ವೆಸ್ಟ್‌ಮೆಂಟ್ಸ್ ಬರುತ್ತವೆ ಅದರ ನೀತಿಯನ್ನು ಕೇಂದ್ರ ಸರ್ಕಾರ ನಿರೂಪಣೆ ಮಾಡುತ್ತದೆ. ಆದುದರಿಂದ ತಮಗೆ ಯಾವ ಸಮಸ್ಯೆಯಾಗಿದ್ದರೂ ಕೂಡ ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು.

ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಎಸ್‌ಸಿ: ಎಸ್‌ಟಿ ಆರರಿಗೆ ಒದಗಿಸಿರುವ ಕೊಳವೆ ಬಾವಿ ಹಾಗೂ ಹಾಸ್ಟೇಲ್ ಸೌಲಭ್ಯಗಳು

33(508):- ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2000-01ರಲ್ಲಿ ಪ್ರಾರಂಭಿಸಿರುವ ಹಾಸ್ಟೆಲ್ ಕಟ್ಟಡಗಳ ಸಂಖ್ಯೆ ಎಷ್ಟು? ಮೆಟ್ರಿಕ್ ನಂತರ ಮೆಟ್ರಿಕ್ ಪೂರ್ವ ವಸತಿ ನಿಲಯ ಜಿಲ್ಲಾವಾರು ವಿವರ ನೀಡುವುದು?

ಆ. ಕಟ್ಟಡ ಒದಗಿಸಿದ್ದಲ್ಲಿ ಯಾವ ಮೂಲಕ ಹಣಕಾಸಿನ ನೆರವನ್ನು ಪಡೆಯಲಾಗಿದೆ ಮತ್ತು ಕಟ್ಟಡ ನಿರ್ಮಾಣದ ಕೆಲಸವನ್ನು ಯಾವ ಏಜೆನ್ಸಿ ವಹಿಸಿಕೊಡಲಾಗಿದೆ?

ಇ. ಆ ಸಂಸ್ಥೆಗೆ ಕಾಲಮಿತಿ ನೀಡಲಾಗಿದೆಯೇ? ಹೌದು

ಈ. 2002-03ರಲ್ಲಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಎಸ್‌ಸಿ:ಎಸ್‌ಟಿ ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆಯೇ?

ಎ. ಶೈಕ್ಷಣಿಕವಾಗಿ ಹಿಂದುಳಿದ ಕೊಪ್ಪಳವನ್ನು ಒಳಗೊಂಡ ಏಳು ಜಿಲ್ಲೆಗಳಲ್ಲಿ ಹೊಸದಾಗಿ ಎಷ್ಟು ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ?

ಊ. ಪ್ರಾರಂಭಿಸದಿದ್ದರೆ ಹಿಂದುಳಿದ ಜಿಲ್ಲೆಗಳು ಶೈಕ್ಷಣಿಕವಾಗಿ ಮುಂದುವರೆಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎ. ಕೃಷ್ಣಪ್ಪ:- (ಸಮಾಜ ಕಲ್ಯಾಣ ಸಚಿವರು)

2000-01ರಲ್ಲಿ ಪ್ರಾರಂಭಿಸಿರುವ ಹಾಸ್ಟೆಲ್ ಕಟ್ಟಡಗಳ ಸಂಖ್ಯೆ-180 ಇಲಾಖಾವಾರು ಹಾಸ್ಟೆಲ್ ಕಟ್ಟಡಗಳ ವಿವರಗಳು ಈ ಕೆಳಗಿನಂತಿವೆ.

1. ಸಮಾಜ ಕಲ್ಯಾಣ ಇಲಾಖೆ : 127